
## ಆನೆ ಆಶೀರ್ವಾದ

ಸುಮಾರು 80–85 ವರ್ಷ ವಯಸ್ಸಿನ ದಂಪತಿ ನಮ್ಮನೆಯ ಪಕ್ಕದಲ್ಲಿದ್ದಾರೆ. ಅವರ ಬದುಕು ನಮಗೆಲ್ಲಾ ಮಾದರಿ. ಹೀಗಾಗಿ ಹೊಸದಾಗಿ ಮದುವೆಯಾದ ನನ್ನ ಮಗ ಹಾಗೂ ಸೊಸೆಯನ್ನು ಆಶೀರ್ವಾದ ಪಡೆಯಲೆಂದು ಅವರ ಮನೆಗೆ ಕರೆದುಕೊಂಡು ಹೋಗಿದ್ದೆ. ಆಗ ಆ ಯಜಮಾನ, 'ದೇವರು ನಿಮ್ಮನ್ನ ಚೆನ್ನಾಗಿ ಇಟ್ಟಿರಲಿ. ನೋಡಮ್ಮ ಮಗು, ನಿನ್ನ ಅತ್ತೆ ಮತ್ತು ಮಾವ ಇಷ್ಟು ವರ್ಷ ನಾಲ್ಕು ಜನ ಮೆಚ್ಚುವಂತೆ 'ಆನೆ'ಯನ್ನು ಕಾಪಾಡಿಕೊಂಡು ಜೀವನ ಮಾಡಿದ್ದಾರೆ. ನೀವೂ ಹಾಗೇ ಏನೇ ಬಂದರೂ 'ಆನೆ'ಯನ್ನು ಚೆನ್ನಾಗಿ ನೋಡಿಕೊಳ್ಳಿ' ಎಂದಾಗ ಮಗ–ಸೊಸೆ ತಬ್ಬಿಬ್ಬು. ನಂತರ ಯಜಮಾನತಿ ನಗುತ್ತಾ, 'ಇವರು ಎಲ್ಲಾ ಕಡೆ ತಮಾಷೆನೆ. 'ಆನೆ' ಅಂದ್ರೆ 'ಆರೋಗ್ಯ', 'ನೆಮ್ಮದಿ' ಕಣ್ಣಮ್ಮ' ಅಂತ ವಿವರಿಸಿದ ಮೇಲೆ ಎಲ್ಲರ ಮುಖದಲ್ಲೂ ನಗು ಮೂಡಿತ್ತು.



**ಜಯಮಾಲಾ ಎನ್. ಪೈ**



## ಚಡ್ಡಿ ದೋಸ್ತ್

ಮೊಮ್ಮಗ ಧೀರಜ್ ತನ್ನ ಸ್ನೇಹಿತ ಅನಿರುದ್ಧನನ್ನು ಮನೆಗೆ ಕರೆತಂದಿದ್ದ. ಅನಿರುದ್ಧ ಬಾಗಿಲಿಗೆ ಬರುತ್ತಿದ್ದಂತೆ, 'ಏನೊ ನೀನು ಪ್ಯಾಂಟು ಹಾಕ್ಕೊಂಡು ಬಂದಿದ್ದೀಯ...' ಅಂತ ರೇಗಿದ. 'ಪ್ಯಾಂಟ್ ಹಾಕಿದ್ರೆ ಏನಾಯ್ತು?' ಎಂದು ಅನಿರುದ್ಧ ಕೇಳಿದ್ದಕ್ಕೆ ಈತ, 'ನಾನು ನಮ್ಮ ಅಜ್ಜಿ–ತಾತನಿಗೆ ನನ್ನ ಚಡ್ಡಿ ದೋಸ್ತ್ ಬರ್ತಿದ್ದಾನೆ ಅಂತ ಹೇಳಿದ್ದೆ... ನೀನು ನೋಡಿದ್ರೆ ಪ್ಯಾಂಟ್ ಹಾಕ್ಕೊಂಡು ಬಂದಿದ್ದೀಯ' ಎಂದು ಅಸಮಾಧಾನ ಹೊರಹಾಕಿದಾಗ ನಮಗೆಲ್ಲ ನಗು ತಡೆಯುವುದೇ ಕಷ್ಟವಾಯಿತು.

**ಕೃಷ್ಣ ಸುಬ್ಬರಾವ್**